# ‘ಅಮರ’ ಅನಂತ ಪೈ



ಇತಿಹಾಸ, ಪುರಾಣ, ಸ್ವಾತಂತ್ರ ಹೋರಾಟದ ವಸ್ತುಗಳನ್ನು ಒಳಗೊಂಡ ಸುಂದರ ವರ್ಣಚಿತ್ರಗಳೊಂದಿಗಿನ ‘ಅಮರ ಚಿತ್ರಕತೆ’ ಮಕ್ಕಳಿಗೆ ಇಂದಿಗೂ ಬಲು ಪ್ರಿಯ. ಇದನ್ನು ಚಿತ್ರಕತೆ ರೂಪದಲ್ಲಿ ಮಕ್ಕಳಿಗೆ ಉಣ ಬಡಿಸಿದವರು ಅನಂತ ಪೈ. ಹೀಗಾಗಿ ಅನಂತ ಪೈ ಮತ್ತು ‘ಅಮರ ಚಿತ್ರಕತೆ’ಗೆ ಅನನ್ಯ ನಂಟು!.

★ ಪಿ. ಶ್ರೀಧರ್ ನಾಯಕ್

ಕೆಲವರು ಇರುತ್ತಾರೆ, ನಮಗೆ ಗೊತ್ತಿಲ್ಲದಂತೆ ನಮ್ಮ ಬದುಕನ್ನು ರೂಪಿಸುತ್ತಾರೆ. ನಮ್ಮ ಸಂಸ್ಕೃತಿ, ದೇಶ, ನಾಗರಿಕತೆಯ ಬಗ್ಗೆ ಹೆಮ್ಮೆ ಮೂಡಿಸುತ್ತಾರೆ. ಅವರಲ್ಲಿ ಯಾವ ಪೂರ್ವಾಗ್ರಹ ಪೀಡಿತ ದೃಷ್ಟಿಕೋನ ಇರುವುದಿಲ್ಲ. ಒಂದು ಜಾತಿ ಅಥವಾ ಕೋಮನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟಿ ಲೌಕಿಕ ಲಾಭ ಪಡೆಯುವ ಅಗತ್ಯ ಅವರಿಗೆ ಇರುವುದಿಲ್ಲ. ಲೌಕಿಕ ಲಾಭಕ್ಕಾಗಿ ಎಂತಹ ಕೆಳಮಟ್ಟಕ್ಕೂ ಇಳಿಯ ಬಯಸುವವರು ತಾತ್ಕಾಲಿಕ ಲಾಭ ಪಡೆದು ಅನಂತರ ಇತಿಹಾಸದ ಕಸದ ಬುಟ್ಟಿ ಸೇರುತ್ತಾರೆ.

ಇತ್ತೀಚೆಗೆ ನಿಧನರಾದ ಅನಂತ ಪೈ ಮೊದಲ ಸಾಲಿಗೆ ಸೇರುತ್ತಾರೆ. ಆದುದರಿಂದಲೇ ಎಲ್ಲ ರಾಷ್ಟ್ರೀಯ ಪತ್ರಿಕೆಗಳು ಅವರ ಸಾವಿನ ಸುದ್ದಿಯನ್ನು ಪ್ರಮುಖವಾಗಿ ಪ್ರಕಟಿಸಿ ಶ್ರದ್ಧಾಂಜಲಿ ಅರ್ಪಿಸಿದವು. ಅನಂತ ಪೈ ಮತ್ತು ಅಮರ ಚಿತ್ರಕತೆ ಒಂದನ್ನು ಬಿಟ್ಟು ಇನ್ನೊಂದಿಲ್ಲ. ಆದುದರಿಂದಲೇ ಅವರು ಅಮರರು.


1929ರ ಸೆಪ್ಟೆಂಬರ್ 17ರಂದು ಕರ್ನಾಟಕದ ಕಾರ್ಕಳದಲ್ಲಿ ಹುಟ್ಟಿದ ಪೈ ಎರಡನೆಯ ವಯಸ್ಸಿನಲ್ಲಿ ತಂದೆ, ತಾಯಿ ಇಬ್ಬರನ್ನೂ ಕಳೆದುಕೊಂಡರು. ಮುಂಬೈಗೆ ಕಾಲಿಟ್ಟಾಗ ಅವರಿಗೆ 12 ವರ್ಷ ವಯಸ್ಸು . ಆದರೆ ತಮ್ಮ ದೌರ್ಭಾಗ್ಯಕ್ಕೆ ಮರುಗುತ್ತಾ ಕೂರದೆ ಬದುಕನ್ನು ಕಟ್ಟಿದರು. ಮುಂಬೈ ವಿವಿಯಿಂದ ಎರಡು ಪದವಿಗಳನ್ನು ಪಡೆದರು. ಅಧ್ಯಯನ ಮಾಡಿದ ರಸಾಯನಶಾಸ್ತ್ರ, ಭೌತಶಾಸ್ತ್ರ ಪದವಿ ಪಡೆಯಲು ಮಾತ್ರ ಸೀಮಿತವಾಯಿತು. ಪ್ರತಿಷ್ಠಿತ ಪತ್ರಿಕಾ ಸಂಸ್ಥೆಯೊಂದರ ಪುಸ್ತಕ ಪ್ರಕಟಣಾ ವಿಭಾಗಕ್ಕೆ ಕಿರಿಯ ಅಧಿಕಾರಿಯಾಗಿ ಸೇರಿದ ಅವರು ಅದೇ ಗುಂಪಿನ ಇಂದ್ರಜಾಲ ಕಾಮಿಕ್ಸ್‌ಗಾಗಿ ದುಡಿದರು.

ಬಳಿಕ ಐಬಿಎಚ್ ಪ್ರಕಾಶನ ಸಂಸ್ಥೆಗೆ ಸೇರಿದ ನಂತರ ಹಿಂದೆ ತಿರುಗಿ ನೋಡಲೇ ಇಲ್ಲ. ಅಲ್ಲಿ ಅದರ ಮಾಲೀಕ ಜಿ.ಎಲ್. ಮೀರ್‌ಚಂದಾನಿ ಅವರ ಬೆಂಬಲ 1967 ರಲ್ಲಿ ಅಮರ ಚಿತ್ರಕತೆಯ ಆರಂಭಕ್ಕೆ ಕಾರಣವಾಯಿತು. ಅವರ ಕನಸಿನ ಕೂಸು ಅಲ್ಲಿ ಬಲಿಷ್ಠವಾಗಿ ಬೆಳೆಯಿತು.

ಒಳ್ಳೆಯ ಸಂಪಾದಕನಲ್ಲಿ ಇರಬೇಕಾಗಿರುವ ಎಲ್ಲ ಉತ್ತಮ ಗುಣಗಳು ಅವರಲ್ಲಿ ಇದ್ದವು. ಯಾರು ಕಥೆ ಬರೆಯಬೇಕು, ಯಾರು ಸಂಭಾಷಣೆ ಬರೆಯಬೇಕು, ಯಾವ ಕಲಾವಿದ ಸರಣಿ ಚಿತ್ರಗಳ ರಚನೆಗೆ ಸೂಕ್ತ ಎನ್ನುವ ಸ್ಪಷ್ಟ ಕಲ್ಪನೆ ಅವರಲ್ಲಿ ಇತ್ತು. ಪತ್ರಕರ್ತ ಎಲ್ಲ ವಿಷಯಗಳಲ್ಲಿ ಪರಿಣತನಾಗಿರುವ ಅಗತ್ಯವಿಲ್ಲ, ಆದರೆ ಯಾರ ಬಳಿ ಯಾವ ಪ್ರತಿಭೆ ಇದೆ, ಹೇಗೆ ಬಳಸಬೇಕು ಎನ್ನುವ ಸ್ಪಷ್ಟ ಕಲ್ಪನೆ ಆತನಲ್ಲಿ ಇದ್ದರೆ ಆತ ಯುದ್ಧ ಆರಂಭವಾಗುವ ಮುನ್ನ ಅರ್ಧ ಗೆದ್ದಂತೆ. ಇದು ಅವರಲ್ಲಿತ್ತು. ಅನಂತ ಪೈಯವರಲ್ಲಿ ಇನ್ನೊಂದು ಗುಣ ವಿತ್ತು. ಅದು ಭಾವಿ ಜನಾಂಗದ ಮೇಲೆ ಅತುಲ ಪ್ರೀತಿ.

60ರ ದಶಕ ಇತ್ತೀಚಿನ ದಿನಗಳಂತೆ ಕಂಪ್ಯೂಟರ್ ಅಥವಾ ಟಿ.ವಿಗೆ ಮಕ್ಕಳನ್ನು ಕಟ್ಟಿ ಹಾಕಿರಲಿಲ್ಲ. ಅವರು ಇತಿಹಾಸ, ಪುರಾಣ, ಸ್ವಾತಂತ್ರ್ಯ ಹೋರಾಟದ ವಸ್ತುಗಳನ್ನು ಸುಂದರ ವರ್ಣಚಿತ್ರಗಳೊಂದಿಗೆ ಹೇಳಿದರೆ ಮಕ್ಕಳ ಮನಸ್ಸನ್ನು ಮುಟ್ಟಬಲ್ಲದು ಎನ್ನುವುದನ್ನು ತಿಳಿದು ಅವನ್ನೇ ಅಮರ ಚಿತ್ರಕತೆಯ ಸರಣಿಗಳಿಗೆ ಬಳಸಿದರು. ತರಗತಿಗಳಲ್ಲಿ ಒಣ ಪಾಠ ಕೇಳುವಾಗ ಕದ್ದು ಮುಚ್ಚಿ ಮಕ್ಕಳು ಇವನ್ನು ಓದಲಾರಂಭಿಸಿದರು. ಇವನ್ನು ಅವರಿಂದ ಕಿತ್ತುಕೊಂಡ ಶಿಕ್ಷಕರು ಅನಂತರ ಇದೇ ಕೆಲಸ ಮಾಡಿದರು. ಅನಂತ ಪೈ ಅವರ ಶಿಶು ಬೆಳೆದು ದೈತ್ಯವಾಯಿತು. 440 ಪುಸ್ತಕಗಳು ಪ್ರಕಟಗೊಂಡು ಸುಮಾರು ಒಂಬತ್ತು ಕೋಟಿ ಜನರ ಕೈಸೇರಿದವು. ರಾಷ್ಟ್ರದ ಪ್ರಮುಖ ಭಾಷೆಗಳಲ್ಲಿ ಪ್ರಕಟವಾದವು. ಕನ್ನಡದಲ್ಲಿ ಡಾ.ಶಿವರಾಮ ಕಾರಂತರು ರೂಪಾಂತರಿಸಿದರು.

1969ರಲ್ಲಿ ರಂಗ ರೇಖ ಫೀಚರ್ಸ್ ಸಿಂಡಿಕೇಟ್ ಪ್ರೈ.ಲಿ.ನ್ನು ಸ್ಥಾಪಿಸಿದರು. ರಾಮ್ ವಾಯಿರಕರ್, ಪ್ರತಾಪ್ ಮುಳಿಕ್ – ಮುಂತಾದ ದಕ್ಷ ಕಲಾವಿದರು ಅವರ ಬೆನ್ನಿಗೆ ನಿಂತರು. ಇದು ದೇಶದ ಪ್ರಥಮ ವ್ಯವಸ್ಥಿತ ಸಿಂಡಿಕೇಟ್. ಆಗ ಚಿತ್ರಮಾಲಿಕೆ ಮತ್ತು ವ್ಯಂಗ್ಯ ಚಿತ್ರಗಳನ್ನು ಪೂರೈಸಲು ಅಮೆರಿಕದ ಕಿಂಗ್ ಫೀಚರ್ಸ್ ಸಿಂಡಿಕೇಟ್ ಮತ್ತು ಯುನೈಟೆಡ್ ಫೀಚರ್ಸ್ ಸಿಂಡಿಕೆಟ್ ಸಕ್ರಿಯವಾಗಿದ್ದವು. ಫ್ಯಾಂಟಮ್, ಮಾಂಡ್ರೇಕ್, ರಿಪ್ಲಿಸ್ ಬಿಲೀವ್ ಇಟ್ ನಾಟ್ – ಮುಂತಾದ ಚಿತ್ರಸರಣಿ ಗಳು ಈ ಸಿಂಡಿಕೇಟ್‌ಗಳಿಂದ ದೇಶದ ವಿವಿಧ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದವು. ಆದರೆ ಭಾರತೀಯ ಸಿಂಡಿಕೇಟ್ ಇರಲಿಲ್ಲ. ಬಿತ್ತದ ಕನ್ನೆ ನೆಲವನ್ನು ಕಂಡ ಪೈ ರಂಗರೇಖ ಫೀಚರ್ಸ್ ಸ್ಥಾಪಿಸಿ ತಾವೇ ರಚಿಸಿದ ರಾಮು–ಶಾಮೂ, ಕಪೀಶ, ರಾಜಿ, ರೇಖಾ, ಫ್ಯಾಂಟಿಸಿ ಫನ್, ಫನ್ ಟೈಮ್– ಮುಂತಾದವುಗಳನ್ನು ಈ ಸಿಂಡಿಕೇಟ್ ಮೂಲಕ ದೇಶದ ಎಲ್ಲೆಡೆ ಕಳುಹಿಸಿದರು. ‘ಸುಧಾ’ ಸೇರಿದಂತೆ ಹತ್ತು ಹಲವು ಪತ್ರಿಕೆಗಳಲ್ಲಿ ಅವು ಪ್ರಕಟವಾದವು. ಕಲಾವಿದರಲ್ಲದ ಅವರು ರಾಮ್ ವಾಯಿರಕರ್, ಪ್ರತಾಪ್ ಮುಳಿಕ್‌ರಂತಹ ಕಲಾವಿದರ ನೆರವು ಪಡೆದರು. ಇವುಗಳ ಪ್ರಕಟಣೆಗೆ ದೇಶದ ಎಲ್ಲೆಡೆ ಸಂಚರಿಸಿ ಪತ್ರಿಕಾ ಸಂಪಾದಕರನ್ನು ಭೇಟಿಯಾದರು.




ನಮ್ಮವರೇ ಆದ ವಿ.ಜಿ.ನರೇಂದ್ರ ಅವರ ‘ರಿಪೋರ್ಟರ್ ಸಂಜು’ ಎಂಬ ಪಾಕೆಟ್ ಕಾರ್ಟೂನ್, ಕನ್ನಡ, ಮರಾಠಿ, ಇಂಗ್ಲಿಷ್ ಪತ್ರಿಕೆಗಳಲ್ಲಿ ಬೆಳಕು ಕಂಡವು. ‘ಅವರು ಅಂಕಲ್ ಪೈ ಎಂದು ಪ್ರಸಿದ್ಧ ನಿಜ. ಆದರೆ ಅವರು ಮಕ್ಕಳಿಗೆ ಮಾತ್ರ ಅಂಕಲ್ ಆಗಿರಲಿಲ್ಲ. ನಮ್ಮಂತಹ ಹಿರಿಯರಿಗೂ ಅಂಕಲ್ ಆಗಿದ್ದರು. ಅವರಲ್ಲಿ ಅಪಾರ ಉತ್ಸಾಹ, ನಾಯಕತ್ವದ ಗುಣ, ಸಂಘಟನಾ ಶಕ್ತಿ ಇತ್ತು. ರಂಗ ರೇಖದಂತಹ ಸಂಸ್ಥೆ ಉಳಿಯ ಬೇಕಾದರೆ ಅಪಾರ ಬಂಡವಾಳ ಬೇಕು. ಆದರೆ ಕೊನೆಗೆ ಹಣದ ಕೊರತೆ ಅವರನ್ನು ಬಾಧಿಸಿತು’ ಎನ್ನುತ್ತಾರೆ ಅವರ ಜತೆ ಕೆಲಸ ಮಾಡಿದ ವಿ.ಜಿ.ನರೇಂದ್ರ. ಅವರಿಗೆ ಮಕ್ಕಳಿಲ್ಲದ ನೋವು ತುಂಬಾ ಕಾಡುತ್ತಿತ್ತು ಎನ್ನುತ್ತಾರೆ ಅವರು. ಖ್ಯಾತ ಚಿತ್ರಕಲಾವಿದ ಚಂದ್ರನಾಥ್ ಅವರು ‘ಹಕ್ಕಬುಕ್ಕ’ ಪುಸ್ತಕಕ್ಕೆ ಚಿತ್ರ ರಚಿಸಿದರು.

ರಂಗ ರೇಖದ ಜನಪ್ರಿಯತೆ ಆಗ ಅಮೆರಿಕದ ಚಿತ್ರ ಮಾಲಿಕೆಗಳನ್ನು ಭಾರತಕ್ಕೆ ಪೂರೈಸುತ್ತಿದ್ದ ಅಮೆರಿಕ ಮೂಲದ ಕಿಂಗ್ ಫೀಚರ್ಸ್ ಸಿಂಡಿಕೇಟ್ ಅನ್ನು ಕಂಗೆಡಿಸಿತು. ಅದು ಎಫ್‌ಐ ಫೀಚರ್ಸ್ ಸಿಂಡಿಕೇಟನ್ನು ಹುಟ್ಟು ಹಾಕಿತು. ಹೆಚ್ಚಿನ ಹಣದ ಆಮಿಷಕ್ಕೆ ಬಲಿಬಿದ್ದು ಕೆಲವು ಕಲಾವಿದರು, ಕತೆಗಾರರು ಪೈಯವರ ಸಿಂಡಿಕೇಟನ್ನು ಬಿಟ್ಟು ಅಲ್ಲಿಗೆ ಹೋದರು. ಖ್ಯಾತ ವ್ಯಂಗ್ಯ ಲೇಖಕ ಅಬಿದ್ ಸುರ್ತಿ ಮತ್ತು ಖ್ಯಾತ ಚಿತ್ರಕಲಾವಿದ ಪ್ರತಾಪ್ ಮುಳಿಕ್ ಅವರ ಶೂಜಾ ಈ ಸಿಂಡಿಕೇಟ್ ಮೂಲಕ ಪತ್ರಿಕಾ ಸಂಸ್ಥೆಗಳನ್ನು ತಲುಪಲು ಆರಂಭಿಸಿತು. ರಂಗ ರೇಖಕ್ಕೆ ಚಿತ್ರ ಮಾಲಿಕೆ ಒದಗಿಸುತ್ತಿದ್ದ ಪ್ರಾಣ್ ಚೋಪ್ರಾ ಅವರು ‘ಇಂಡಿಯನ್ ಫೀಚರ್ಸ್’ ಎಂಬ ಸಿಂಡಿಕೇಟ್ ಆರಂಭಿಸಿದರು. 1980ರಲ್ಲಿ ಪೈ ಅವರು ಟ್ವಿಂಕಲ್ ಮಕ್ಕಳ ಪತ್ರಿಕೆ ಹುಟ್ಟು ಹಾಕಿದರು. ಇದೂ ಜನಪ್ರಿಯ ವಾಯಿತು. ಪೈ ಅವರು ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವ ಬಗ್ಗೆ, ಬದುಕಿನಲ್ಲಿ ಯಶಸ್ಸು ಸಂಪಾದಿಸುವ ಬಗ್ಗೆ ಕೃತಿಗಳನ್ನು ಇಂಗ್ಲಿಷ್‌ನಲ್ಲಿ ಬರೆದರು. ಅವರು ಬರೆದುದೆಲ್ಲ ಜನಪ್ರಿಯವಾಯಿತು.

ಕಳೆದ ತಿಂಗಳ 19ರಂದು ಜೀವಮಾನದ ಸಾಧನೆಗೆ ದೆಹಲಿಯಲ್ಲಿ ನಡೆದ ದೇಶದ ಪ್ರಥಮ ಕಾಮಿಕ್ ಸಮಾವೇಶದಲ್ಲಿ ಪ್ರಶಸ್ತಿ ಪಡೆದರು. ಇದಾದ ಕೆಲವೇ ದಿನಗಳಲ್ಲಿ ಅಂದರೆ 24ರಂದು ಹೃದಯಾಘಾತದಿಂದ ನಿಧನರಾದರು. ಕೋಟ್ಯಂತರ ಜನರ ಬಾಲ್ಯದಲ್ಲಿ ರಂಜನೆ, ಜ್ಞಾನ ಒದಗಿಸಿದ ಸಾರ್ಥಕ ಬದುಕು ಕೊನೆಗೆ ಅಂತ್ಯವಾಯಿತು. ■